# ಮೂರ್ತಿ, ಹೊಸ ರೀತಿ ಮತ್ತು ಪ್ರೀತಿ

'ಮಾದ ಮತ್ತು ಮಾನಸಿ' ಶೀರ್ಷಿಕೆಯಲ್ಲೇ ಮಾಧುರ್ಯವನ್ನು ಹೊಂದಿರುವ ಸಿನಿಮಾ. ಸತೀಶ್ ಪ್ರಧಾನ್ ನಿರ್ದೇಶನದ ಈ ಸಿನಿಮಾಕ್ಕೆ ಸಂಗೀತ ನಿರ್ದೇಶಕ ಮನೋಮೂರ್ತಿ ಅವರು ಬಂಡವಾಳ ಹೂಡಿರುವುದು ವಿಶೇಷ. ತೆರೆ ಕಾಣುವುದನ್ನು ಮುಂದಕ್ಕೆ ಹಾಕಿಕೊಂಡೇ ಬಂದ ಈ ಸಿನಿಮಾ, ಇದೀಗ ಅದ್ದೂರಿಯಾಗಿ ಪ್ರೇಕ್ಷಕರ ಮುಂದೆ ಬರುತ್ತಿದೆ (ನ. 25ರಂದು)



ಮಾದನ ಪಾತ್ರದಲ್ಲಿ ಪ್ರಜ್ವಲ್ ದೇವರಾಜ್ ಹಾಗೂ ಮಾನಸಿಯಾಗಿ ಶ್ರುತಿ ಹರಿಹರನ್ ಕಾಣಿಸಿಕೊಂಡಿದ್ದಾರೆ. ಇಬ್ಬರ ಜೋಡಿ ತೆರೆಯ ಮೇಲೆ ಮುದ್ದಾಗಿ ಕಾಣಿಸುತ್ತದೆ ಹಾಗೂ ಪ್ರೇಕ್ಷಕರಿಗೆ ಮೋಡಿ ಮಾಡಲಿದೆ ಎನ್ನುವ ನಿರೀಕ್ಷೆ ನಿರ್ದೇಶಕರದು.

ಪ್ರಜ್ವಲ್ ಅವರಿಗೆ 'ಮಾದ ಮತ್ತು ಮಾನಸಿ' ಬಗ್ಗೆ ನಿರೀಕ್ಷೆಗಳಲ್ಲದೆ ಆಪ್ತಭಾವವೂ ಇದೆ. 'ಇದು ನನ್ನ ಮನಸ್ಸಿಗೆ ಹತ್ತಿರವಾದ ಸಿನಿಮಾ' ಎಂದು ಭಾವುಕವಾಗಿ ಹೇಳುವ ಅವರು, ಶೂಟಿಂಗ್ ಲೊಕೇಶನ್ ಆಯ್ಕೆಯಿಂದ ಹಿಡಿದು ಚಿತ್ರ ರೂಪುಗೊಳ್ಳುವ ಪ್ರಕ್ರಿಯೆಯಲ್ಲಿ ಆತ್ಮೀಯವಾಗಿ ತೊಡಗಿಸಿಕೊಂಡಿದ್ದರಂತೆ.

'ಮನೋ ಮೂರ್ತಿ' ಅವರ ಸಂಗೀತ ಸಿನಿಮಾದ ವಿಶೇಷಗಳಲ್ಲೊಂದು. ಶೃಂಗಾರ, ಶೋಕರಸಗಳ ಜೊತೆಗೆ ಆಧುನಿಕ ಸಂದರ್ಭದ ಹುಮ್ಮಸ್ಸನ್ನೂ ಬಿಂಬಿಸುವ ರೂಪದಲ್ಲಿ ಗೀತೆಗಳು ಮೂಡಿಬಂದಿವೆಯಂತೆ. 'ತಾಂತ್ರಿಕವಾಗಿ ನಮ್ಮದು ಅತ್ಯುತ್ತಮ ಸಿನಿಮಾ' ಎಂದು ಮನೋಮೂರ್ತಿ ವಿಶ್ವಾಸದಿಂದ ಹೇಳುತ್ತಾರೆ. ರಂಗಾಯಣ ರಘು ಅವರ ಪಾತ್ರ ಚಿತ್ರದ ಮತ್ತೊಂದು ಆಕರ್ಷಣೆ. ಈ ಪಾತ್ರ ಪ್ರೇಕ್ಷಕರನ್ನು ಕಾಡಲಿದೆಯಂತೆ. ವಾಣಿಶ್ರೀ, ಬುಲೆಟ್ ಪ್ರಕಾಶ್, ಮಣಿ ಶೆಟ್ಟಿ ಹಾಗೂ ಯತಿರಾಜ್ ತಾರಾಗಣದಲ್ಲಿರುವ ಪ್ರಮುಖರು.



# ಇನ್ನೊಂದು ಕನಸು!

ವೇದಿಕೆಯ ತುಂಬ ಕನಸುಗಳು ತುಂಬಿ ತುಳುಕಿದಂತೆ ಕಾಣಿಸುತ್ತಿತ್ತು. ಅದು 'ಎರಡು ಕನಸು' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಕಾರ್ಯಕ್ರಮ. ನಾಲ್ಕು ದಶಕಗಳ ಹಿಂದೆ ರಾಜಕುಮಾರ್, ಕಲ್ಪನಾ, ಮಂಜುಳಾ ಅಭಿನಯದಲ್ಲಿ ತೆರೆ ಕಂಡಿದ್ದ 'ಎರಡು ಕನಸು' ಕನ್ನಡದ ಯಶಸ್ವೀ ಚಿತ್ರಗಳಲ್ಲೊಂದು. ಈಗ ಅದೇ ಶೀರ್ಷಿಕೆಯನ್ನು ಬಳಸಿಕೊಂಡು ಚಿತ್ರರಸಿಕರನ್ನು ಮೋಡಿ ಮಾಡಲು ಸಿದ್ಧವಾಗುತ್ತಿದೆ ಹೊಸ ಚಿತ್ರತಂಡ.

ಮದನ್ ಈ ಕಾಲದ 'ಎರಡು ಕನಸು' ಚಿತ್ರದ ನಿರ್ದೇಶಕ. ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ನಿರ್ದೇಶನದ ಸೂತ್ರಗಳನ್ನು ಕಲಿತಿರುವ ಅವರು, ಮಧುರಸ್ಮೃತಿಯೊಂದನ್ನು ಚಿತ್ರದ ಶೀರ್ಷಿಕೆಯಾಗಿಸಿಕೊಂಡು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಪ್ರೇಮದ ಜೊತೆಗೆ ಯುವ ತಲೆಮಾರಿನ ತವಕ ತಲ್ಲಣಗಳನ್ನೂ ಚಿತ್ರದ ಕಥೆ ಬಿಂಬಿಸುತ್ತದಂತೆ. ವಿಜಯ ರಾಘವೇಂದ್ರ ಮುಖ್ಯಪಾತ್ರದಲ್ಲಿ ನಟಿಸಿರುವ ಈ ಚಿತ್ರದ ನಾಯಕಿಯರಾಗಿ ಕಾರುಣ್ಯ ರಾಮ್ ಹಾಗೂ ಕೃಷಿ ತಾಪಂಡ ನಟಿಸಿದ್ದಾರೆ.

ಸ್ಟೀವ್ ಮತ್ತು ಕೌಶಿಕ್ ಸಂಗೀತ ಸಂಯೋಜನೆಯ ಗೀತೆಗಳಿಗೆ ಕೇಳುಗರನ್ನು ಹಿಡಿದಿಡುವ ಗುಣವಿದೆ ಎನ್ನುವುದು ಮದನ್ ಅನಿಸಿಕೆ. ಹಾಡುಗಳ ಧ್ವನಿಮುದ್ರಿಕೆ ಸಂದರ್ಭದಲ್ಲಿ ಹಿರಿಯ ನಿರ್ದೇಶಕ ಎಸ್.ಕೆ. ಭಗವಾನ್, ಪುನೀತ್ ರಾಜಕುಮಾರ್, ವಿಜಯ ರಾಘವೇಂದ್ರರ ತಂದೆ ಚಿನ್ನೇಗೌಡ ಅವರು ಭಾಗವಹಿಸುವ ಮೂಲಕ ಕಾರ್ಯಕ್ರಮದ ಶೋಭೆ ಹೆಚ್ಚಿಸಿದ್ದರು.

ಮಡಿಕೇರಿ, ಮೈಸೂರು, ದೇವನಹಳ್ಳಿ ಸುತ್ತಮುತ್ತ ಚಿತ್ರೀಕರಣ ನಡೆಸಿರುವ 'ಎರಡು ಕನಸು' ಸಿನಿಮಾ ಈಗ ತೆರೆ ಕಾಣುವ ಮುಹೂರ್ತಕ್ಕಾಗಿ ಕಾಯುತ್ತಿದೆ.

■ ರಘು